# ಸರ್ವಜ್ಞನ ವಚನಗಳಲ್ಲಿ ಕೃಷಿವಿಜ್ಞಾನ

**ಮಲ್ಲಿಕಾರ್ಜುನ ಎಂ.ಸಿ.**

ಸಹಾಯಕ ಪ್ರಾಧ್ಯಾಪಕರು(ಕನ್ನಡ), ಕೃಷಿ ವಿಜ್ಞಾನಗಳ ಮಹಾವಿದ್ಯಾಲಯ,
ಇರುವಕ್ಕಿ, ಶಿವಮೊಗ್ಗ.

**DOI: https://doi.org/10.5281/zenodo.15124134**

## ABSTRACT:

ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣ ಸನ್ನಿವೇಶದ ಪ್ರಭಾವದಿಂದಾಗಿ ಗ್ರಾಮೀಣ ಜನತೆ ಮತ್ತು ಯುವಕರು ಕೃಷಿಯಿಂದ ವಿಮುಖರಾಗಿ ನಗರ ಬದುಕಿಗೆ ಆಕರ್ಷಿತರಾಗಿ ನಗರಗಳನ್ನು ಸೇರುತ್ತಿದ್ದಾರೆ. ಇನ್ನೂ ಕೆಲ ಪ್ರಯೋಗಶೀಲ ಯುವ ಮನಸ್ಸುಗಳು, ಇಂಜಿನಿಯರ್‌ಗಳು ಕೃಷಿಗೆ ಆಕರ್ಷಿತರಾಗಿ ಹಳ್ಳಿಗಳಿಗೆ ಬಂದು ನೆಲೆಸಿ, ಕೃಷಿಯಲ್ಲಿ ಅನೇಕ ಪ್ರಯೋಗಗಳನ್ನು ನಡೆಸಿ ಯಶಸ್ವಿಯಾಗುತ್ತಿದ್ದಾರೆ. ಇಂಥ ಸಂದಿಗ್ಧ ಸ್ಥಿತಿಯಲ್ಲಿ ನಮ್ಮ ಯುವಕರು ಮತ್ತು ಗ್ರಾಮೀಣ ಜನತೆ ಹೆಜ್ಜೆಹಾಕುತ್ತಿದ್ದಾರೆ. ನಮ್ಮ ಹಳ್ಳಿಗಳಲ್ಲಿ ಬಹುಪಾಲು ಕೂಲಿಕಾರ್ಮಿಕರಿಲ್ಲದೆ, ಕೆಲ ಕುಟುಂಬದಲ್ಲಿ ಸದಸ್ಯರೂ ಇಲ್ಲದೆ ಇಂದು ನಮ್ಮ ಹಳ್ಳಿಗಳು ವೃದ್ಧರ ಆಶ್ರಯ ತಾಣಗಳಾಗಿ ಮಾರ್ಪಡುತ್ತಿವೆ. ಇಂದು ಕೃಷಿಯನ್ನು ಉಳಿಸಿಕೊಳ್ಳುವುದು ನಮ್ಮ ಹಳ್ಳಿಗಳ ಅಸ್ತಿತ್ವದ ಪ್ರಶ್ನೆಯಾಗಿ ಕಾಡುತ್ತಿದೆ. ನಮ್ಮ ಜನಪದರ, ವಚನಕಾರರ ದೇಸಿ ಕೃಷಿ ಜ್ಞಾನ ಮತ್ತು ಪರಂಪರೆಯ ಕೃಷಿ ಇಂದಿಗೂ ನಮಗೆ ಪ್ರಜ್ಞೆಯಾಗಿ ಮತ್ತೆ ಮತ್ತೆ ಕಾಡುತ್ತಿದೆ.

ನಾಡಿನೆಲ್ಲೆಡೆ ಏಕ ಬೆಳೆ ಪದ್ಧತಿ ಅನುಸರಿಸುತ್ತಿರುವುದು, ಹೆಚ್ಚಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾ, ಲಾಭದಾಯಕ ಬೆಳೆಗಳನ್ನಷ್ಟೆ ಬೆಳೆದು ಹೆಚ್ಚಿನ ಆದಾಯವನ್ನು ಗಳಿಸಬೇಕೆಂಬ ಆಸೆಯು ನಮ್ಮ ನೆಲದ ಆಹಾರ ಸಂಸ್ಕೃತಿಯ ಬೆಳೆಗಳು ಮರೆಯಾಗುವಂತೆ ಮಾಡುತ್ತಿದೆ. ನಮ್ಮ ಜನಪದರು ಕೃಷಿಯನ್ನು ಎಂದೂ ಲಾಭದಾಯಕವಾಗಿ ನೋಡಿದವರಲ್ಲ. ಕೃಷಿಯನ್ನು ನಮ್ಮ ಆಹಾರದ ಭಾಗವಾಗಿ, ಸಂಸ್ಕೃತಿಯ ಭಾಗವಾಗಿ ನೋಡಿದವರು. ಇಂದು ಅಧಿಕ ಇಳುವರಿ ಪಡೆಯಲು ಬೆಳೆಗಳಿಗೆ ಹೆಚ್ಚು ಹೆಚ್ಚು ರಾಸಾಯನಿಕ ಗೊಬ್ಬರಗಳನ್ನು, ಕೀಟ–ಪೀಡೆನಾಶಕಗಳನ್ನು ಬಳಸಿಕೊಂಡು ನೆಲಜಲವನ್ನು ಕಲುಷಿತಗೊಳಿಸಲಾಗುತ್ತಿದೆ. ಇಂದು ಯಂತ್ರ–ತಂತ್ರಜ್ಞಾನಗಳನ್ನು ಬಳಸಿಕೊಂಡು ಕೃಷಿಯಲ್ಲಿ ಪ್ರಗತಿಯನ್ನು ಸಾಧಿಸಲಾಗುತ್ತಿದೆ. ಕೃಷಿಗೆ ಇಂತಹ ಆಧುನಿಕತೆ ಬೇಕು. ಆದರೆ ಇದನ್ನು ಎಷ್ಟು ಬೇಕೊ ಅಷ್ಟನ್ನು ಮಾತ್ರ ಬಳಕೆ ಮಾಡಿಕೊಂಡರೆ ಅನುಕೂಲವಾಗುತ್ತದೆ. ನಮ್ಮ ಹಳ್ಳಿಗಳಲ್ಲಿ ಅನೇಕ ಪ್ರಗತಿಪರ ರೈತರು, ಯುವ ರೈತರು ಇಂದಿಗೂ ದುಡಿಮೆಗೆ ಬದ್ದರಾಗಿ ನಮ್ಮ ಹಳ್ಳಿಗಳಲ್ಲಿ ದುಡಿಯುತ್ತಿರುವುದರಿಂದ, ನಮ್ಮ ರೈತರು ದೇಶಕ್ಕೆ ಅನ್ನ ಕೊಡುವ ಅನ್ನದಾತರಾಗಿದ್ದಾರೆ.

## KEYWORDS:

ವಚನ, ಕೃಷಿ ತಂತ್ರಜ್ಞಾನ, ಕೃಷಿ ವಿಜ್ಞಾನ, ಪಾರಂಪರಿಕ ಜ್ಞಾನ, ಬೇಸಾಯ ವಿಜ್ಞಾನ, ಕೀಟ ವಿಜ್ಞಾನ.

**ಪ್ರವೇಶ:**

ಪ್ರಾಚೀನಕಾಲದ ಕೃಷಿ ಕುರಿತ ದಾಖಲೆಗಳು, ಸಿಂಧೂ ನಾಗರಿಕತೆ, ವೇದಗಳ ಕಾಲದ ಕೃಷಿ ಮತ್ತು ಜನಜೀವನದ ಮಾಹಿತಿಗಳು ಹೇರಳವಾಗಿ ದೊರೆಯುತ್ತವೆ. ಮಹಾಭಾರತ, ರಾಮಾಯಣ ಕಾಲದ ಕೃಷಿ, ಬುದ್ಧ, ಮಹಾವೀರನ ಕಾಲದಲ್ಲಿನ ಕೃಷಿ ವಿಧಾನಗಳನ್ನು ಕುರಿತು ಅಧ್ಯಯನ ಕೈಗೊಳ್ಳಬಹುದಾಗಿದೆ. ಆರಂಭದಲ್ಲಿ ಕೃಷಿ ಚಟುವಟಿಕೆಗಳು ಮೌಖಿಕ ಜ್ಞಾನಪರಂಪರೆಯಾಗಿ ನಾಡಿನುದ್ದಗಲಕ್ಕೂ ಅನುಸರಿಸಿಕೊಂಡು ಬಂದಿರುವುದನ್ನು ನಾವು ನೋಡಿದ್ದೇವೆ. ಇಲ್ಲಿ ಬಹುತೇಕ ಅನಕ್ಷರಸ್ಥರೇ ಇದ್ದಂತಹ ಕೃಷಿಕರು, ತಮ್ಮ ಅನುಭವದ ಮೂಸೆಯಲ್ಲಿ ಕೃಷಿ ತಂತ್ರಜ್ಞಾನವನ್ನು ಬಾಯಿಂದ ಬಾಯಿಂದ ಪ್ರಸಾರ ಮಾಡಿ ಅನುಸರಿಸುತ್ತಾ ಬಂದಿದ್ದಾರೆ. ಈ ನಮ್ಮ ಜನಪದ ಕೃಷಿಕರ ಮಳೆಯಜ್ಞಾನ, ಹವಾಮಾನ ಆಧಾರಿತ ಬೆಳೆಗಳನ್ನು ಬೆಳೆಯುವ ಪರಿ, ಮಳೆ ನಕ್ಷತ್ರಗಳನ್ನ ನೋಡುವ ಬಗೆ, ಕೃಷಿಯ ಮೇಲಿನ ನಂಬಿಕೆಗಳು, ಬೀಜ ಬಿತ್ತನೆ ಸಮಯ, ಜಾನುವಾರುಗಳ ಸಾಕಣೆಯ ಜ್ಞಾನ ಇತ್ಯಾದಿಗಳ ಕುರಿತು ಕೃಷಿ ಪರಂಪರೆಯನ್ನು ಅರಿತುಕೊಳ್ಳಲು ಜಾನಪದ ಇಂದಿಗೂ ಅಧ್ಯಯನದ ಆಕರವಾಗಿದೆ. ಅಂದು ಹವಾಮಾನ ವೈಪರೀತ್ಯ ಹಾಗೂ ಪ್ರಕೃತಿ ವಿಕೋಪಗಳನ್ನು ಎದುರಿಸಿ, ಪ್ರಾಣಿ, ಕೀಟ–ಪೀಡೆಗಳ ಹಾವಳಿಯಿಂದ ಪಾರಾಗಿ ಬೆಳೆಗಳನ್ನು ಬೆಳೆದು ಕೃಷಿಯನ್ನು ಸಂರಕ್ಷಣೆ ಮಾಡಿದ ಬಗೆ ವಿಶಿಷ್ಟವಾಗಿ ನೋಡಬೇಕಾಗಿದೆ. ಈ ರೀತಿಯ ಕೃಷಿ ಪಾರಂಪರಿಕ ಜ್ಞಾನದ ಬಗ್ಗೆ ಸಾವಿರಾರು ವರ್ಷಗಳ ಇತಿಹಾಸವಿರುವ ಆಕರಗಳನ್ನಿಟ್ಟುಕೊಂಡು ವೈಜ್ಞಾನಿಕವಾಗಿ ಅಧ್ಯಯನ ಮಾಡಬೇಕಿದೆ.

ಈ ಹಿನ್ನೆಲೆಯಲ್ಲಿ ದುಡಿಮೆಯ ಸಂಸ್ಕೃತಿಯನ್ನು ಸಾರಿದ 12ನೇ ಶತಮಾನದ ವಚನಕಾರರು, ಕೃಷಿಯ ಕಾರಣಕ್ಕಾಗಿ ಮತ್ತೆ ಮತ್ತೆ ನೆನಪಾಗುತ್ತಾರೆ. ಬಹುಪಾಲು ವಚನಕಾರರ ವಚನಗಳಲ್ಲಿ ಕೃಷಿ ಸಂಸ್ಕೃತಿ, ದುಡಿಮೆ ಸಂಸ್ಕೃತಿ ಹಾಗೂ ಕೃಷಿ ವಿಜ್ಞಾನದ ನೆಲೆಗಳು ಮತ್ತು ವೈಜ್ಞಾನಿಕ ಚಿಂತನೆಗಳನ್ನು ಕಾಣಬಹುದಾಗಿದೆ. ನಮ್ಮ ಆದ್ಯವಚಕಾರರಾದ ದೇವರದಾಸಿಮಯ್ಯ, ಬಸವಣ್ಣ, ಒಕ್ಕಲಿಗ ಮುದ್ದಣ್ಣ, ನುಲಿಯ ಚಂದಯ್ಯ, ಅಕ್ಕಮಹಾದೇವಿ, ಅಲ್ಲಮಪ್ರಭು, ಸಿದ್ದರಾಮೇಶ್ವರ, ದೇಶಿಸಂಗನ ಬಸವಯ್ಯ, ಕಾಡಸಿದ್ದೇಶ್ವರ ಇವರೆಲ್ಲರ ವಚನಗಳಲ್ಲಿ ಆಧ್ಯಾತ್ಮ ಕುರಿತೇ ಇದ್ದರೂ ಅಲ್ಲಿ ಹುಡುಕಾಟ ಮಾಡಿದ ಸಂದರ್ಭದಲ್ಲಿ ಅನೇಕ ವಚನಗಳಲ್ಲಿ ಕೃಷಿ ವಿಜ್ಞಾನ ಕುರಿತ ಸುಳಿವುಗಳು ನಮಗೆ ಲಭ್ಯವಾಗುತ್ತವೆ. ಈ ವಚನಕಾರರು ನೇರವಾಗಿ ಕೃಷಿ ವಿಜ್ಞಾನವನ್ನು ಹೇಳದೆ ಇದ್ದರೂ ಸಹ ಕೃಷಿಯನ್ನು ವೈಜ್ಞಾನಿಕವಾಗಿ ನೋಡಲು ಸಾಧ್ಯವಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ವಚನಕಾರರಲ್ಲಿನ ಕೃಷಿವಿಜ್ಞಾನವನ್ನು ಕುರಿತಾಗಿ ಅಧ್ಯಯನವಾಗಬೇಕಿದೆ.

**ಸರ್ವಜ್ಞನ ವಚನಗಳಲ್ಲಿ ಕೃಷಿ ವಿಜ್ಞಾನದ ಹುಡುಕಾಟ:**

ಸರ್ವಜ್ಞನ ವಚನಗಳು ರಚನೆಗೊಂಡ (16–17ನೇ ಶತಮಾನ) ಕಾಲಘಟ್ಟದ ಕೃಷಿವಿಜ್ಞಾನ ಮತ್ತು ತಂತ್ರಜ್ಞಾನ ಹುಡುಕಾಟದ ಭಾಗವಾಗಿ ಇಲ್ಲಿನ ವಚನಗಳನ್ನು ನೋಡಲಾಗಿದೆ. ಸರ್ವಜ್ಞನ ವಚನಗಳಲ್ಲಿ ನಿಖರವಾದ ಕೃಷಿವಿಜ್ಞಾನ ಮತ್ತು ತಂತ್ರಜ್ಞಾನಗಳು ಇರುವುದರಿಂದ, ಈ ಕುರಿತ ಅಧ್ಯಯನ ಕೈಗೊಳ್ಳಲಾಗಿದೆ. ಇಲ್ಲಿ ಸರ್ವಜ್ಞ ಕೃಷಿವಿಜ್ಞಾನವನ್ನೇ ಹೇಳುತ್ತಿದ್ದೇನೆ ಎಂದು ನೇರವಾಗಿ ಎಲ್ಲಿಯೂ ಘೋಷಣೆ ಮಾಡಿಕೊಂಡಿಲ್ಲ. ತನ್ನ ವಚನಗಳಲ್ಲಿ ಆಧ್ಯಾತ್ಮವನ್ನು ಅಥವಾ ನೈತಿಕತೆಯನ್ನು ಇನ್ನಿತರ ವಿಚಾರಗಳನ್ನು ಕುರಿತು ಹೇಳುತ್ತಿದ್ದರೂ, ಅಲ್ಲಿ ಕೃಷಿವಿಜ್ಞಾನವನ್ನು ಹುಡುಕಾಟದ ಭಾಗವಾಗಿ ನೋಡಿದಲ್ಲಿ, ಸಾಕಷ್ಟು ವಚನಗಳಲ್ಲಿ ಕೃಷಿ ವಿಜ್ಞಾನದ ಹಾಗೂ ಕೃಷಿತಂತ್ರಜ್ಞಾನ ಬೇರುಗಳು ನಮಗೆ ದೊರೆಯುತ್ತವೆ. ಪ್ರಸ್ತುತ ಈ ಹಿನ್ನೆಲೆಯಲ್ಲಿ ಲೋಕಜ್ಞಾನಿಯಾದ ಸರ್ವಜ್ಞನ ವಚನಗಳಲ್ಲಿ ಕೃಷಿವಿಜ್ಞಾನವನ್ನು ನೋಡುವ ಪ್ರಯತ್ನ ಮಾಡಲಾಗಿದೆ.

**“ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯ ಮೇಲು**
**ಮೇಟಿಯಿಂ ರಾಟಿ ನಡೆದುದಲ್ಲದೆ ದೇಶ**
**ದಾಟವೇ ಕೆಡಗು ಸರ್ವಜ್ಞ”**

ಪ್ರಸಕ್ತ ದಿನಗಳಲ್ಲಿ ನಾನು ಕೃಷಿಕ ಎಂದು ಹೇಳಿಕೊಳ್ಳಲು ಹಿಂಜರಿಯುವಂತಹ ಸನ್ನಿವೇಶದಲ್ಲಿ ಈ ವಚನ ನಮಗೆಲ್ಲರಿಗೂ ನಾನು ಕೃಷಿಕ ಎಂದು ಎದೆತಟ್ಟಿಕೊಂಡು ಹೇಳುವ ಹಾಗೂ ಆತ್ಮವಿಶ್ವಾಸದಿಂದ ಹೇಳಲು ಸಾಧ್ಯವಾಗುವಂತೆ ಮಾಡಿದೆ. ಸರ್ವಜ್ಞ ಕೃಷಿಯ ಬಗೆಗೆ ಅತ್ಯುನ್ನತವಾದ ಗೌರವ, ಘನತೆಯನ್ನು ತಂದುಕೊಟ್ಟವರಲ್ಲಿ ಪ್ರಮುಖರಾಗಿದ್ದಾರೆಂಬುದು ಈ ವಚನದಿಂದ ತಿಳಿಯುತ್ತದೆ. ಕೋಟಿವಿದ್ಯೆಗಿಂತ ಮೇಟಿ ವಿದ್ಯೆಯೇ ಮೇಲು ಎನ್ನುವ ಮೂಲಕ ಕೃಷಿವಿಜ್ಞಾನದ ಅಧ್ಯಯನದ ಮಹತ್ವವನ್ನು ಜಗತ್ತಿಗೆ ಪರಿಚಯಿಸಲಾಗಿದೆ. ಕೃಷಿವಿಜ್ಞಾನದ ಜ್ಞಾನ ಶ್ರೇಷ್ಠ ಎಂಬ ಆಶಯವನ್ನು ಈ ವಚನದಲ್ಲಿ ಅಭಿವ್ಯಕ್ತಿಸಿರುವುದನ್ನು ಕಾಣಬಹುದಾಗಿದೆ. ಕೃಷಿಯನ್ನು ವೈಜ್ಞಾನಿಕವಾಗಿ ಅನುಸರಿಸದೇ ಹೋದಲ್ಲಿ ದೇಶವನ್ನು ಮುನ್ನಡೆಸಲು ಸಾಧ್ಯವಾಗದೇ ಕೇಡನ್ನು ಎದುರಿಸುವಂತಾಗುತ್ತದೆ ಎಂಬ ಎಚ್ಚರಿಕೆಯನ್ನು ಈ ವಚನದ ಮೂಲಕ ಸರ್ವಜ್ಞ ತಿಳಿಸಿದ್ದಾನೆ.

**“ಒಕ್ಕಲಿಲ್ಲದ ಊರು ಮಕ್ಕಳಿಲ್ಲದ ಮನೆಯು**
**ಲೆಕ್ಕವಿಲ್ಲದನ ಬೇಹಾರ, ಇವು ಮೂರು**
**ದಕ್ಕು ಕಾಣಯ್ಯ ಸರ್ವಜ್ಞ”**

“ಭಾರತ ದೇಶದ ಆರ್ಥಿಕತೆಯ ಬೆನ್ನೆಲುಬು ಕೃಷಿ” ಎಂಬ ಮಾತಿನ ಸಾಲು ಸವಕಲು ನಾಣ್ಯವಾಗಿ ಬಿಟ್ಟಿದೆ. ಕೃಷಿ ವಿಷಯ ಬರವಣಿಗೆಯಲ್ಲಿ ಮೊದಲನೇ

ಪ್ಯಾರಾದಲ್ಲಿ ಇದು ಸರ್ವೇಸಾಮಾನ್ಯ ಪ್ರಾಸದ ರೀತಿ ಬಳಕೆಯಾಗುತ್ತಿದ್ದು, ಇಂದು ಪೇಲವವಾಗಿ ಕಾಣುತ್ತಿದೆ. ಆದರೆ ಒಂದಂತೂ ಸತ್ಯ, ಭಾರತ ಹಳ್ಳಿಗಳ ದೇಶ, ನಮ್ಮ ಹಳ್ಳಿಗಳ ಪ್ರಧಾನ ಕಸುಬು ಕೃಷಿಯಾಗಿರುವುದನ್ನು ನಾವೆಲ್ಲರೂ ಒಪ್ಪಿಕೊಳ್ಳಬೇಕಾಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಹಳ್ಳಿಗಳಲ್ಲಿನ ಮೂಲ ಕಸುಬು ಕೃಷಿ ಸಹಜವಾಗಿತ್ತು, ಎನ್ನುವುದು ವಚನದಲ್ಲಿ ವ್ಯಕ್ತವಾಗುತ್ತದೆ. ಗ್ರಾಮೀಣ ಜನತೆ ಅವಿಭಕ್ತ ಕುಟುಂಬದ ಪರಿಕಲ್ಪನೆಯಲ್ಲಿ ಅಸ್ತಿತ್ವದಲ್ಲಿದ್ದ ಸಂದರ್ಭದಲ್ಲಿ ಮಕ್ಕಳು ಇಲ್ಲದ ಮನೆಯನ್ನು ಕಲ್ಪಿಸಿಕೊಳ್ಳಲು ಸಾಧ್ಯವಿರಲಿಲ್ಲ. ಆಗಿನ ಕಾಲಕ್ಕೆ ಕುಟುಂಬದ ಎಲ್ಲಾ ಸದಸ್ಯರು ಸಂಪೂರ್ಣವಾಗಿ ಕೃಷಿಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಕೃಷಿಯನ್ನು ಸಮರ್ಥವಾಗಿ ಮುನ್ನಡೆಸಲು ಸಾಧ್ಯವಾಗಿತ್ತು, ಎಂಬ ಇಂಗಿತವು ವಚನದಲ್ಲಿ ವ್ಯಕ್ತವಾಗುತ್ತದೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಕೃಷಿಕ ವ್ಯಾವಹಾರಿಕವಾಗಿ ಲೆಕ್ಕಚಾರ ಮಾಡದೆ ಕೃಷಿಯನ್ನು ಮಾಡಲು ಹೋದರೆ ನಷ್ಟ ಅನುಭವಿಸಬೇಕಾಗುತ್ತದೆ, ಎಂಬ ಎಚ್ಚರಿಕೆಯನ್ನು ಸರ್ವಜ್ಞ ನೀಡುತ್ತಾನೆ. ಇಲ್ಲಿ ಕೃಷಿಯನ್ನು ವ್ಯಾವಹಾರಿಕವಾಗಿ, ಲೆಕ್ಕಾಚಾರದ ಆಧಾರದ ಮೇಲೆ ಮಾಡುವಂತಹ ಕೃಷಿ ನಮಗೆ ಬೇಕಿದೆ. ಅಂತಹ ಕೃಷಿ ಅರ್ಥಶಾಸ್ತ್ರದ ಮಹತ್ವ ಸಾರುವ ಮತ್ತು ಜಾಗೃತಿ ಮೂಡಿಸುತ್ತಿರುವುದನ್ನು ಈ ವಚನದ ಮೂಲಕ ಕಂಡುಕೊಳ್ಳಬಹುದಾಗಿದೆ. ಒಕ್ಕಲಿಲ್ಲದ ಊರು, ಮಕ್ಕಳಿಲ್ಲದ ಮನೆ, ಲೆಕ್ಕಚಾರವಿಲ್ಲ ವ್ಯವಹಾರ ಈ ಮೂರು ಇಲ್ಲದೆ ಹೋದಲ್ಲಿ ಅದನ್ನು ದಕ್ಕಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಎಚ್ಚರಿಕೆ ನೀಡುತ್ತಿದೆ ಈ ವಚನ.

**“ಭಂಡಾರ ತುಂಬಿ ನೀ ಭಂಡಿಯಲಿ ಹೇರುವರೆ**
**ಮಂಡಲವನಾಳಿ ಮರೆಯುವರೆ ಒಕ್ಕಲನು**
**ಕೊಂಡಾಡಬೇಕು ಸರ್ವಜ್ಞ”**

ಪ್ರಸಕ್ತ ದಿನಮಾನಗಳಲ್ಲಿ ಕೃಷಿಕನನ್ನು ಮತ್ತು ಕೃಷಿಯನ್ನು ಕಡೆಗಣಿಸಿ ನೋಡಲಾಗುತ್ತಿದೆ. “ಬೇಸಾಯ ಅಂದರೆ ನಾ ಸಾಯ ನೀ ಸಾಯ, ಮನೆಮಂದಿಯೆಲ್ಲಾ ಸಾಯ” ಜಾನಪದ ಉಕ್ತಿ ಪ್ರಚಲಿತದಲ್ಲಿದೆ. ನಮ್ಮ ಸಮಾಜದಲ್ಲಿ ಕೃಷಿಕನಿಗೆ ಹೆಣ್ಣು ಕೊಡಲು ಹಿಂದೆಮುಂದೆ ನೋಡುತ್ತಿರುವ ಇಂದಿನ ದಿನಗಳಲ್ಲಿ, ವೈದ್ಯ, ಇಂಜಿನಿಯರ್, ಇತರೆ ವೃತ್ತಿಯಲ್ಲಿರುವ ಗಂಡಿಗೆ ಹೆಚ್ಚಿನ ಪ್ರಾಶಸ್ತ್ಯ ದೊರೆಯುತ್ತಿದೆ. ಕೃಷಿಕ ವೃತ್ತಿಯ ಗಂಡನ್ನು ಕೇಳುವವರಿಲ್ಲದೆ, ನಮ್ಮ ಕೃಷಿಕನ ಆತ್ಮಸ್ಥೈರ್ಯವನ್ನು ಕುಗ್ಗಿಸುವಂತಹ ಸನ್ನಿವೇಶವಿದೆ. ಆದರೆ ಈ ವಚನದಲ್ಲಿ ನಮ್ಮ ಕೃಷಿಕನಿಗೆ ಪ್ರೀತಿ, ಗೌರವ, ಆತ್ಮವಿಶ್ವಾಸ ಮೂಡಿಸಬೇಕೆಂಬ ಆಶಯದ ಮಾತುಗಳು ಇಲ್ಲಿ ಕಂಡುಬರುತ್ತದೆ. ಇಲ್ಲಿ ಒಕ್ಕಲಿಗನನ್ನು ಕೊಂಡಾಡಬೇಕು ಎಂಬ ಮಾತಿನಲ್ಲಿ ಇದು ವ್ಯಕ್ತವಾಗುತ್ತದೆ. ಶ್ರೀಮಂತ ವ್ಯವಸ್ಥೆ ಇರಬಹುದು, ಆಡಳಿತಶಾಹಿ ವ್ಯವಸ್ಥೆ ಇರಬಹುದು, ಇವರೆಲ್ಲರೂ ನಮ್ಮ ಕೃಷಿಕನನ್ನು ಮರೆಯಬಾರದು ಎಂಬ ಒತ್ತಾಸೆಯಾಗಿ ಹೇಳಿರುವ ಮಾತು, ಇಂದಿಗೂ

ಔಚಿತ್ಯಪೂರ್ಣವಾಗಿ ಕಂಡುಬರುತ್ತಿದೆ.

**"ಉತ್ತೊಮ್ಮೆ ಹರಗದೆಲೆ ಬಿತ್ತೊಮ್ಮೆ ನೋಡದಲೆ**
**ಹೊತ್ತೇರಿ ಹೊಲಕೆ ಹೋದರೆ ಅವ ತನ್ನ**
**ನೆತ್ತರವ ಸುಡುವ ಸರ್ವಜ್ಞ"**

ಈ ವಚನದಲ್ಲಿ ಸರ್ವಜ್ಞ ಓರ್ವ ಬೇಸಾಯ ವಿಜ್ಞಾನಿ ಮತ್ತು ಬೀಜವಿಜ್ಞಾನಿ (ಸೀಡ್‌ಸೈಂಟಿಸ್ಟ್) ಯಾಗಿ ಕಂಡುಬರುತ್ತಾನೆ. ಕೃಷಿ ಭೂಮಿಯನ್ನು ಯಾವ ವಿಧಾನದಲ್ಲಿ ಉಳುಮೆ ಮಾಡಬೇಕು ಎಂಬ ವಿಚಾರವನ್ನು ಇಲ್ಲಿ ತಿಳಿಸಲಾಗಿದೆ. ಜೊತೆಗೆ ಉಳುಮೆಯಾದ ಜಮೀನಿನ ಹೆಂಟೆಯನ್ನು ಹರಗುವ ಮೂಲಕ ಮಣ್ಣನ್ನು ಹುಡಿ(ಪುಡಿ)ಯಾಗಿಸಿ ಅನಂತರದಲ್ಲಿ ಬೀಜವನ್ನು ಬಿತ್ತನೆ ಮಾಡಬೇಕು ಎಂಬುದು ತಿಳಿದುಬರುತ್ತದೆ. ತಿಳಿಸುತ್ತಾನೆ. ಅಲ್ಲದೆ ಸರ್ವಜ್ಞ ಮಣ್ಣು ವಿಜ್ಞಾನಿ (ಸಾಯಿಲ್ ಸೈಂಟಿಸ್ಟ್) ಯಾಗಿ ಕಂಡುಬರುತ್ತಾನೆ. ಮಣ್ಣಿನ ಆರೋಗ್ಯ ಕಾಪಾಡಿಕೊಂಡರೆ ಬಿತ್ತಿದ ಬೀಜ ಮೊಳಕೆ ಬರಲು ಸಾಧ್ಯ ಎಂಬ ಸಂದೇಶವನ್ನು ಕೃಷಿಕನಿಗೆ ನೀಡುತ್ತಾನೆ. ಬಿತ್ತಿದ ಬೆಳೆಯನ್ನು ಜತನವಾಗಿ ಕಾಪಾಡಿಕೊಂಡು ಬೆಳೆ ಆರೈಕೆ ಮಾಡದೇ ಹೋದಲ್ಲಿ ನಷ್ಟ ಕಟ್ಟಿಟ್ಟ ಬುತ್ತಿ ಎಂಬ ಎಚ್ಚರಿಕೆಯನ್ನು ವಚನಕಾರ ನೀಡುತ್ತಾನೆ. ಇಲ್ಲಿ ಬೆಳೆ ಶರೀರ ಕ್ರಿಯಾಶಾಸ್ತ್ರದ ಔಚಿತ್ಯ ಈ ವಚನದಲ್ಲಿ ನಮಗೆ ವ್ಯಕ್ತವಾಗುತ್ತದೆ. ಬೆಳೆಗೆ ತಕ್ಕ ಉಪಚಾರ ಮಾಡುವುದು, ಸರಿಯಾದ ಸಮಯಕ್ಕೆ ಜಮೀನಿಗೆ ಭೇಟಿಕೊಟ್ಟು ನೋಡುವುದರಿಂದ ಬೆಳೆಯ ಫಸಲನ್ನು ಉತ್ತಮವಾಗಿ ಪಡೆಯಬಹುದು. ಇಲ್ಲದೆ ಹೋದಲ್ಲಿ ಸೋಮಾರಿತನದಿಂದ ಸೂರ್ಯ ನೆತ್ತಿಯ ಮೇಲೆ ಬಂದಾಗ ಹೊಲಕ್ಕೆ ಹೋಗಿ ನೋಡಲು ಉದಾಸೀನ ಮಾಡಿದಲ್ಲಿ ಬೆಳೆ ಸಂರಕ್ಷಣೆ ಸಾಧ್ಯವಾಗದೆ, ಬೆಳೆಯೆಲ್ಲ ಹಾಳಾಗುತ್ತದೆ ಎಂಬ ಸಂದೇಶವನ್ನು ಕೃಷಿಕರಿಗೆ ನೀಡುತ್ತಾನೆ.

**"ಹದಬೆಯಲಾರಂಬ ಕದನದಲಿ ಕೂರಂಬ**
**ನದಿಯ ಹಾಯುವಲಿ ಹರಗೋಲ ಮರೆದಾತ**
**ವಿಧಿಯ ಬೈದೇನು? ಸರ್ವಜ್ಞ"**

ಈ ಮೇಲಿನ ವಚನ ಬೇಸಾಯ ವಿಜ್ಞಾನದ ಆಶಯವನ್ನು ನಮ್ಮ ಕೃಷಿಕರಿಗೆ ಮನವರಿಕೆ ಮಾಡಲು ಯತ್ನಿಸುತ್ತಿದೆ. ಹದ ನೋಡು ಉಳುಮೆ ಮಾಡು, ಹದ ನೋಡಿ ಬೀಜ ಬಿತ್ತನೆ ಮಾಡು ಎಂಬ ಮಾತುಗಳು ನಮ್ಮ ಜನಪದರು ಅನುಸರಿಸಿಕೊಂಡು ಬರುತ್ತಿರುವ ಪದ್ಧತಿಯಾಗಿದೆ. ಒಳ್ಳೆಯ ಹದವಿದ್ದಾಗ ಭೂಮಿಯನ್ನು ಉಳುಮೆ ಮಾಡುವುದು ಮತ್ತು ಬಿತ್ತನೆ ಮಾಡುವುದು ಸೂಕ್ತ. ಒಂದು ವೇಳೆ ಮೈಮರೆತರೆ ಅದು ಕೃಷಿ ಆಗುವುದಿಲ್ಲ ಎಂಬ ಜಾಗೃತಿಯನ್ನು ಮೂಡಿಸಲು ಯತ್ನಿಸಲಾಗಿದೆ. ಅದೇ ರೀತಿ ಯುದ್ಧ ಮಾಡುವಾಗ ಕೈಕಟ್ಟಿಕೂತರೆ, ಹರಿಯುವ ನದಿಯ ವಿರುದ್ಧ ಹರಿಗೋಲು ಹಾಯಿಸಲು ಹೋದರೆ ಮತ್ತು ಸರಿಯಾದ ಸಮಯಕ್ಕೆ

ಬೇಸಾಯ ಹಾಗೂ ಬಿತ್ತನೆ ಮಾಡದೇ ಇದ್ದಲ್ಲಿ ವಿಧಿಯನ್ನು ಬೈಯ್ಯುವುದರಿಂದ ಏನು ಪ್ರಯೋಜನವಾಗುವುದಿಲ್ಲ, ಅದರ ನಷ್ಟ ನಮಗೆ ಎಂಬ ಮಾತನ್ನು ಸ್ಪಷ್ಟ ನುಡಿಯಲ್ಲಿ ಈ ವಚನ ತಿಳಿಸುತ್ತದೆ.

**"ನಲ್ಲೆತ್ತು ಬಂಡಿ ಬಲವಿಲ್ಲದ ಆರಂಬ**
**ಕಲ್ಲು ಕಸಗಳನು ಬಿಟ್ಟಾತ ಹೊಲದೊಳಗೆ**
**ಹುಲ್ಲನೇ ಬೆಳೆವ ಸರ್ವಜ್ಞ"**

ಈ ವಚನ ಮೇವಿನ(ಫಾಡರ್ ಕ್ರಾಪ್)ಬೆಳೆಗಳ ಬಗ್ಗೆ ತಿಳಿಸುವ ಪ್ರಯತ್ನ ಮಾಡುತ್ತದೆ. ಭತ್ತದ ಹುಲ್ಲನ್ನು ಮೇಯುವ ಎತ್ತು, ಉತ್ತಮ ಬಂಡಿ ಇಲ್ಲದಿರುವುದು, ಶಕ್ತಿವಂತ ಅಲ್ಲದವನು ಕೃಷಿಯನ್ನು ಮಾಡಬಾರದೆಂಬ ಸಂದೇಶ ವಚನ ನೀಡುತ್ತದೆ. ಎತ್ತಿಗೆ ಗಟ್ಟಿಮುಟ್ಟಾದ ಪೌಷ್ಟಿಕಭರಿತ ಮೇವು ಬೇಕು. ಆ ಮೂಲಕ ಬಲಿಷ್ಠ ಎತ್ತುಗಳನ್ನು ಕೃಷಿಗೆ ಬಳಸಿಕೊಳ್ಳುವುದರ ಜೊತೆಗೆ ಗಟ್ಟಿಮುಟ್ಟಾದ ಬಂಡಿಯನ್ನು ಹೊಂದುವುದರ ಮೂಲಕ ಬಲ ಆಧಾರಿತ ಕೃಷಿಯನ್ನು ಮಾಡಬೇಕೆಂಬುದು ಸರ್ವಜ್ಞನ ಆಶಯವಾಗಿದೆ. ಎಡೆಕುಂಟೆಯಲ್ಲಿ ಜಮೀನನ್ನು ಎತ್ತಿನ ಮೂಲಕ ಬೆಳೆಯ ಮಧ್ಯೆ ಹರಗದೆ ಬಿಟ್ಟರೆ ಕಳೆ ಹೆಚ್ಚಾಗಿ ಬೆಳೆದು ಬೆಳೆ ಹಾಳಾಗುತ್ತದೆ ಎಂಬ ಸೂಚನೆಯನ್ನು ವಚನದಲ್ಲಿ ನೀಡಲಾಗಿದೆ. ಇಲ್ಲಿ ಕಳೆ ವಿಜ್ಞಾನಕ್ಕೆ(ವೀಡ್ ಸೈನ್ಸ್) ಹಾಗೂ ಕಳೆ ನಿಯಂತ್ರಣಕ್ಕೆ ಹೆಚ್ಚಿನ ಮಹತ್ವ ನೀಡಲಾಗಿದೆ. ಇಲ್ಲಿ ಬೆಳೆಯನ್ನು ಉಳಿಸಿಕೊಳ್ಳುವ ಬಗ್ಗೆ ಜಾಗೃತಿ ಮೂಡಿಸುವ ಪ್ರಯತ್ನವನ್ನು ಈ ವಚನದಲ್ಲಿ ಮಾಡಲಾಗಿದೆ.

**"ಹರಗದ ಎತ್ತಾಗಿ ಬರಡಾದ ಹಯನಾಗಿ**
**ಹರಟೆ ಹೊಡೆಯುವ ಮಗನಾಗೆ ಹೊಲದಲ್ಲಿ**
**ಕರಡವೇ ಬೆಳೆಗು ಸರ್ವಜ್ಞ"**

ಈ ವಚನದಲ್ಲಿ ಬೇಸಾಯದ ಸಾಧನ ಕುರಿತು ಹೇಳಲಾಗಿದೆ. ಅಂದು ಕೃಷಿಯ ಪ್ರಮುಖ ಸಾಧನವೆಂದರೆ ಎತ್ತು ಆಗಿತ್ತು. ಉಳುಮೆ ಮಾಡಲು ಯೋಗ್ಯವಾದ ಎತ್ತು ಇಲ್ಲದೆ ಕೃಷಿ ಸಾಧ್ಯವಿಲ್ಲ ಎಂಬುದನ್ನು ತಿಳಿಸುತ್ತದೆ. ಅದೇ ರೀತಿ ಶಕ್ತಿಗುಂದಿದ ಕುದರೆಯಾದರೆ, ದುಡಿಮೆ ಮಾಡದೆ ಬರೀ ಹರಟೆ ಹೊಡೆದುಕೊಂಡು ಸೋಮಾರಿಯಾದ ಮಗನಿದ್ದರೆ, ಕೃಷಿಯಲ್ಲಿ ಯಾವುದೇ ಬೆಳೆಯನ್ನು ಪಡೆಯಲು ಸಾಧ್ಯವಿಲ್ಲ ಎಂಬುದನ್ನು ವಚನವು ನೇರವಾಗಿ ಹೇಳುತ್ತದೆ. ಉಳುಮೆ ಮಾಡುವಂತಹ ಎತ್ತುಗಳು ದಷ್ಟಪುಷ್ಟವಾಗಿ ಶಕ್ತಿಶಾಲಿಯಾಗಿ ಸದೃಢವಾಗಿದ್ದರೆ, ಕೃಷಿ ಚೆನ್ನಾಗಿ ಆಗುತ್ತದೆ. ಇಲ್ಲದೆ ಹೋದಲ್ಲಿ ಹೊಲದ ತುಂಬಾ ಒಣ ಹುಲ್ಲನ್ನು ಬೆಳೆಯಬೇಕಾಗುತ್ತದೆ ಎಂಬ ಅರಿವನ್ನು ಕೃಷಿಕನಿಗೆ ನೀಡಲಾಗಿದೆ. ಇಲ್ಲಿ ಕೃಷಿಕ ಬೆಳೆಯನ್ನು ತುಂಬಾ ಎಚ್ಚರಿಕೆಯಿಂದ ಕಾಪಾಡಿಕೊಳ್ಳಬೇಕೆಂಬ ಸಂದೇಶವನ್ನು ಈ ವಚನವು ವ್ಯಕ್ತಗೊಳಿಸುತ್ತದೆ.

**"ದಂಡು ಇಲ್ಲದ ಅರಸು ಕೊಂಡವಿಲ್ಲದ ಹೋಮ**
**ಬಂಡಿಯಿಲ್ಲದನ ಬೇಸಾಯ, ತಲೆ ಹೋದ**
**ಮುಂಡದಂತಿಕ್ಕು ಸರ್ವಜ್ಞ"**

ಈ ವಚನದಲ್ಲಿ ಕೃಷಿ ಎಂಜಿನಿಯರಿಂಗ್ ಇರುವುದನ್ನು ನಾವು ಕಂಡುಕೊಳ್ಳಬಹುದಾಗಿದೆ. ಅಂದು ಕೃಷಿಯ ಪ್ರಮುಖ ಉಪಕರಣವೆಂದರೆ ಬಂಡಿಯಾಗಿತ್ತು. ಕೃಷಿಸಂಬಂಧಿತ ಉಪಕರಣಗಳನ್ನು ಸಾಗಿಸಲು ಹಾಗೂ ದವಸ ಧಾನ್ಯಗಳನ್ನು ಸಾಗಿಸಲು ಬಂಡಿ ಅಗತ್ಯವಿತ್ತು. ಬಂಡಿ ಇಲ್ಲದ ಸಂದರ್ಭದಲ್ಲಿ ಕೃಷಿ ಉಪಕರಣಗಳು ಮತ್ತು ಧಾನ್ಯಗಳನ್ನು ಒಂದೆಡೆಯಿಂದ ಮತ್ತೊಂದೆಡೆ ಸಾಗಿಸಲು, ಕೂಲಿ ಕಾರ್ಮಿಕರ ಅವಲಂಬನೆಯ ಜೊತೆಗೆ ದುಬಾರಿ ವೆಚ್ಚ ತೆರಬೇಕಾಗಿತ್ತು. ಈ ವೆಚ್ಚವನ್ನು ಕಡಿಮೆ ಮಾಡುವುದು ಮತ್ತು ಕೃಷಿಯನ್ನು ಲಾಭದಾಯಕವಾಗಿಸಿಕೊಳ್ಳಲು ಬಂಡಿ ಮಹತ್ವ ಹಾಗೂ ಅಗತ್ಯತೆಯನ್ನು ಕುರಿತು ವಚನದಲ್ಲಿ ಸೂಚ್ಯವಾಗಿ ತಿಳಿಸುತ್ತದೆ. ಅದಕ್ಕಾಗಿ ಸೈನ್ಯವಿಲ್ಲದ ರಾಜ, ಕುಂಡವಿಲ್ಲದ ಹೋಮ, ಕೃಷಿಗೆ ಬಂಡಿ ಇಲ್ಲದಿರುವುದು ತಲೆ ಇಲ್ಲದ ಮುಂಡಕ್ಕೆ ಹೋಲಿಕೆ ಮಾಡಿ ಕೃಷಿಕನಿಗೆ ನೇರವಾಗಿ ಚಾಟಿಬೀಸಿರುವುದನ್ನು ಈ ವಚನದಲ್ಲಿ ಕಾಣುತ್ತೇವೆ.

**"ವೀಳೆಯಿಲ್ಲದ ಬಾಯಿ ಕೂಳು ಕಾಣದ ನಾಯಿ**
**ಬಾಳೆಗಳು ಇಲ್ಲದೆಲೆದೋಟ, ಪಾತರದ**
**ಮೇಳ ಮುರಿದಂತೆ ಸರ್ವಜ್ಞ"**

ಸರ್ವಜ್ಞ ಈ ವಚನದ ಮೂಲಕ ಒಬ್ಬ ತೋಟಗಾರಿಕೆ ವಿಜ್ಞಾನಿಯಾಗಿ ಕಂಡುಬರುತ್ತಾನೆ. ಅಡಿಕೆ, ತೆಂಗು, ವೀಳೆಎಲೆ, ಬಾಳೆ ಇತ್ಯಾದಿಗಳನ್ನು ತೋಟಗಾರಿಕೆ ಬೆಳೆಗಳಲ್ಲಿ ಅಂತರ ಬೆಳೆಯಾಗಿ ಬೆಳೆಯುತ್ತಿರುವುದನ್ನು ಈ ವಚನ ತಿಳಿಸುತ್ತದೆ. ಅಂದರೆ ಇಲ್ಲಿ ತೋಟಗಾರಿಕೆಯ ಮುಖ್ಯ ಬೆಳೆಗಳ ಜೊತೆಗೆ ಅಂತರ್‌ಬೆಳೆಗಳನ್ನು ಬೆಳೆಯುತ್ತಿದ್ದರು. ಇಲ್ಲಿ ಮುಖ್ಯ ಬೆಳೆಯ ಜೊತೆಗೆ ಅನೇಕ ಉಪ ಬೆಳೆಗಳನ್ನು ಬೆಳೆಯುವ ಮೂಲಕ ಸಮಗ್ರ ತೋಟಗಾರಿಕೆ ಪದ್ಧತಿಯನ್ನು ಅನುಸರಿಸುತ್ತಿರುವುದು ವಚನದಲ್ಲಿ ಗೋಚರವಾಗುತ್ತದೆ. ಇನ್ನೊಂದು ರೀತಿಯಲ್ಲಿ ವೀಳೆಎಲೆ ಹಾಕಿಕೊಳ್ಳದ ಬಾಯಿ(ಆರೋಗ್ಯ ), ಊಟವನ್ನ ಕಾಣದೇ ಇರುವಂತಹ ನಾಯಿ(ಹಸಿವು), ಬಾಳೆ ಎಲೆ ಇಲ್ಲದ ಊಟ ಇವೆಲ್ಲವೂ ಸೇರಿ ಪಾತರದ(ದುಂಬಿಗಳ) ಮೇಳವನ್ನು ಕೆಡಿಸಿದಂತೆ ಎನ್ನುವ ಅರ್ಥವನ್ನು ನೀಡುವುದರ ಜೊತೆಗೆ ಸಮಗ್ರ ತೋಟಗಾರಿಕೆ ಪದ್ಧತಿಯನ್ನು ಅಳವಡಿಸಿಕೊಳ್ಳುವ ಬಗ್ಗೆ ತಿಳಿಸಿಕೊಡುವ ಪ್ರಯತ್ನ ವಚನದಲ್ಲಿ ಕಾಣಬಹುದಾಗಿದೆ.

**"ಎರೆಪಿಯನ್ನು ಉಳುವಂಗೆ ದೊರೆಯನು ಪಿಡಿದಂಗೆ**
**ಉರಗಭೂಷಣನ ನೆನೆವಂಗೆ ಭಾಗ್ಯವು**
**ಅರಿದಲ್ಲವೆಂದ ಸರ್ವಜ್ಞ"**

ಮಣ್ಣುವಿಜ್ಞಾನವನ್ನು ತಿಳಿಸಿಕೊಡುವ ಮೂಲಕ ಮಣ್ಣಿನ ಮಹತ್ವ ಕುರಿತು ಈ ವಚನವು ಅಭಿವ್ಯಕ್ತಗೊಳಿಸುತ್ತದೆ. "ಎರಿ ಇದ್ದವ ದೊರೆ" ಎಂಬ ಮಾತು ಉತ್ತರ ಕರ್ನಾಟಕದ ಭಾಗದಲ್ಲಿ ಜನಪ್ರಿಯವಾದ ಉಕ್ತಿಯಾಗಿದೆ. ಎರೆ ಭೂಮಿಯಲ್ಲಿ ಕೃಷಿ ಮಾಡಿದಾತನಿಗೆ ಸಮೃದ್ಧವಾದ ಫಸಲನ್ನು ತೆಗೆಯಬಹುದೆಂಬುದು ವಚನದ ಆಶಯವಾಗಿದೆ. ಎರೆ ಭೂಮಿಯಲ್ಲಿ ಕೃಷಿ ಮಾಡಿದರೆ, ಕೃಷಿಕ ಶ್ರೀಮಂತನಾಗುತ್ತಾನೆ ಆತನಿಗೆ ದೊರೆತನ ಲಭಿಸುತ್ತದೆ ಎನ್ನುವುದು ಈ ವಚನದ ಆಶಯವಾಗಿದೆ. ತನ್ನ ದೇಹದಲ್ಲಿ ಸರ್ಪವನ್ನು ಧರಿಸಿದ ಶಿವನನ್ನು ನೆನೆಯುವವನಿಗೆ ಐಶ್ವರ್ಯ ಸಂಪತ್ತು ಲಭಿಸುತ್ತದೆ. ಅದೇ ರೀತಿ ಕೃಷಿಯನ್ನು ಶ್ರದ್ಧಾಭಕ್ತಿಯಿಂದ ಅನುಸರಿಸಿದರೆ ಸಂಪತ್ತು ಲಭಿಸಲಿದೆ ಎಂಬ ಆಶಯವು ಸಹ ವ್ಯಕ್ತವಾಗುತ್ತದೆ. ಕಪ್ಪು ಮಣ್ಣಿನ ಮಹತ್ವವನ್ನು ಸಾರಿರುವುದು ಈ ವಚನದಲ್ಲಿ ಕಂಡುಬರುತ್ತದೆ. ಈ ಕಪ್ಪು ಭೂಮಿಯಲ್ಲಿ ಕೃಷಿಯನ್ನು ಮಾಡುವ ಸಂದರ್ಭದಲ್ಲಿ ಮಣ್ಣಿನ ಜ್ಞಾನವನ್ನು ಹೊಂದಿರಬೇಕೆಂಬ ಆಶಯವನ್ನು ಸರ್ವಜ್ಞ ವ್ಯಕ್ತಪಡಿಸುತ್ತಾನೆ.

ಒಟ್ಟಾರೆ ಸರ್ವಜ್ಞನ ವಚನಗಳಲ್ಲಿ ಕೃಷಿವಿಜ್ಞಾನದ ಆಶಯಗಳನ್ನು ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ. ಈ ಕೃಷಿತಂತ್ರಜ್ಞಾನವನ್ನು ಕೃಷಿಕರಿಗೆ ವರ್ಗಾವಣೆ ಮಾಡುವ ಯತ್ನವನ್ನು ವಚನಗಳು ಮಾಡುತ್ತವೆ. ಇಲ್ಲಿ ಕೃಷಿಕ ಮೈಮರೆತರೆ, ಕೆಡುಕಿನ ಬಗೆಗೆ, ಎಚ್ಚರಿಕೆಯನ್ನು ನೀಡುವ ಜಾಗೃತ ಸ್ಥಿತಪ್ರಜ್ಞನಾಗಿ ಸರ್ವಜ್ಞ ನಮಗೆ ಕಂಡುಬರುತ್ತಾನೆ. ಸರ್ವಜ್ಞ ತನ್ನ ವಚನದ ಅಭಿವ್ಯಕ್ತಿಯಲ್ಲಿ ಕೃಷಿ ವಿಜ್ಞಾನಿಯಾಗಿ, ತೋಟಗಾರಿಕೆ ವಿಜ್ಞಾನಿಯಾಗಿ, ತಂತ್ರಜ್ಞಾನಿಯಾಗಿ ಹಾಗೂ ಮಣ್ಣು ವಿಜ್ಞಾನಿಯಾಗಿ ಕಂಡುಬರುತ್ತಾನೆ ಎಂಬುದನ್ನು ಈ ಅಧ್ಯಯನ ಗುರುತಿಸಲು ಯತ್ನಿಸಿದೆ.

**ಪರಾಮರ್ಶನ ಗ್ರಂಥಗಳು:**


1. ವಿದ್ಯಾಶಂಕರ್ ಎಸ್. (ಸಂ), (1974), ಸರ್ವಜ್ಞ ವಚನ ಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
2. ವಿದ್ಯಾಶಂಕರ್ ಎಸ್. (ಸಂ), (1993), ಸಂಕೀರ್ಣ ವಚನ: ಸಂಪುಟ–2, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
3. ಚನ್ನಪ್ಪ ಉತ್ತಂಗಿ (ಸಂ), (2005), ಸರ್ವಜ್ಞ ವಚನಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.